

ಸಂಜೆ ಹೊತ್ತಿಗೆ ನೀರು ತಗ್ಗುತ್ತಾ ಬರುತ್ತಿತ್ತು. ಊರಬದಿಯಲ್ಲಿ, ಹಿಂದಿನ ರಾತ್ರೆ ಕೊಪ್ಪರಿಗೆ ಬೆಟ್ಟ ಕುಸಿದು ಮೂರು ಮಕ್ಕಳು ಮಣ್ಣಡಿಗಾದ ಶೋಕ ಎಲ್ಲರ ಎದೆಯಲ್ಲಿ ಇನ್ನು ಹಾಗೆ ಮಡುಗಟ್ಟಿಕೊಂಡು ಇತ್ತು. ಬೆಟ್ಟದ ಬುಡದಲ್ಲಿರುವ ಮನೆ. ಹೀಗೆ ಬೆಟ್ಟ ಕುಸಿಯಬಹುದೆಂಬ ಕಲ್ಪನೆಯೇ ಇರಲಿಲ್ಲ. ಯಾವುದೋ ಕ್ಷಣದಲ್ಲಿ ಮೈಸಡಿಲಿಸಿ ಎಲ್ಲವನ್ನು ಧ್ವಂಸ ಮಾಡಿತ್ತು. ಮೂರು ಮಕ್ಕಳೂ ಒಂದೇ ಕೋಣೆಯಲ್ಲಿ ಮಲಗಿದ್ದರು. ಹಿಂದಿನ ಬರೆಯ ಮಣ್ಣು ಜರಿದು ಅದೇ ಕೋಣೆಗೆ ಬಿದ್ದಿತ್ತು. ಉಳಿದವರು ಎದುರಿನ ರೂಮಿನಲ್ಲಿ ಮಲಗಿದ ಕಾರಣ ಸಣ್ಣ ಪುಟ್ಟ ಪೆಟ್ಟು ಬಿಟ್ಟರೆ ಉಳಿದ ಅನಾಹುತಗಳು ಆಗಲಿಲ್ಲ. ಹಿರಿಯರಿದ್ದೂ ಮಕ್ಕಳನ್ನಷ್ಟೇ ಕರೆದೊಯ್ದ ವಿಧಿಗೆ ಶಾಪ ಹಾಕಿ ಹೆತ್ತವರು ಸುಸ್ತಾಗಿ ಬಿದ್ದಿದ್ದರು. ಬೆಳಗ್ಗೆಯಿಂದ ಸಂಘ ಸಂಸ್ಥೆಯವರೆಲ್ಲ ಸೇರಿ ತಮ್ಮಿಂದಾದ ಸಹಾಯ, ಸಾಂತ್ವನ ಮಾಡುತ್ತಿದ್ದರು. ಆ ಮನೆ ರಿಪೇರಿಗೆ ವಿನಾಯಕ ಸಂಘದ ವತಿಯಿಂದ ಶ್ರಮದಾನ ಮಾಡಲು ಊರ ಗಂಡಸರು ಹೋಗಿದ್ದರು. ಈ ಮನೆಯ ಗಂಡಸರೂ ಅಲ್ಲಿಗೇ ಹೋಗಿದ್ದರು. ದಾಸ-ಸೀನ ಇಬ್ಬರಿಗೆ ಇಲ್ಲಿ ಇಷ್ಟೆಲ್ಲ ಅನಾಹುತ ತಂದು ಹಾಕಿರಬಹುದೆಂಬ ಕಲ್ಪನೆಯೇ ಇರಲಿಲ್ಲ.

ಯಾವ ಊರಲ್ಲಿ ಯಾವ ಕ್ಷಣದಲ್ಲಿ ಯಾರ ಊಹೆಗೂ ನಿಲುಕದ ಏನೆಲ್ಲ ಸಂಭವಿಸಿಬಿಡುತ್ತದೆ ಅಂತ ಹೇಳಲಾಗುವುದಿಲ್ಲ. ಇಲ್ಲದಿದ್ದರೆ ಎಲ್ಲೋ ಸುರಿದ ಮಳೆಗೆ ಇಲ್ಲಿ ಹೊಳೆ ತುಂಬಿ ನೀರು ನುಗ್ಗಿ ಇಷ್ಟೆಲ್ಲಾ ಅನಾಹುತ ಮಾಡುತ್ತದೆ ಅಂತ ಯಾರಿಗೆ ಗೊತ್ತಿತ್ತು?

ಸೀನ ಮನೆಗೆ ಬಂದಾಗ ನೀರಿಳಿದಿದ್ದರೂ ಅಂಗಳದಲ್ಲಿ ತುಂಬಿಕೊಂಡ ಕೆಸರು ಗೊರಸು ನೋಡಿ ಮನೆಯೊಳಗೆ ನೀರು ಬಂದಿದೆಯೆಂಬುದನ್ನು ಅಂದಾಜಿಸಿಕೊಳ್ಳಲು ಹೆಚ್ಚು ಸಮಯ ಬೇಕಾಗಲಿಲ್ಲ. ಬಾಗಿಲು ಹಾಕಿದ್ದು ನೋಡಿದರೆ ಸರೋಜ ಎಲ್ಲೋ ಸುರಕ್ಷಿತ ಸ್ಥಳಕ್ಕೆ ಹೋಗಿದ್ದಾಳೆ ಅನ್ನುವುದು ಒಳ ಮನಸ್ಸು ಹೇಳುತ್ತಿತ್ತು. ಆದರೂ ಎದೆಯೊಳಗೆ ಪುಕುಪುಕು. ಎಷ್ಟು ಫೋನಾಯಿಸಿದರೂ ಸರೋಜಳ ಫೋನು ತಾಕುತ್ತಿಲ್ಲ. ಹೊರಡುವ ಗಡಿಬಿಡಿಯಲ್ಲಿ ಆಕೆ ಫೋನನ್ನು ಬಿಟ್ಟು ಹೋಗಿ ಅದರ ಮೇಲೆ ನೀರು ಬಂದಿರಬೇಕು.

ಅಷ್ಟರಲ್ಲೇ, ‘ಸೀನ ಭಾವ ಇಲ್ಲೇ ಬಂದು ಬಿಡಿ. ಸರೋಜಳೂ ಇಲ್ಲೇ ಇದ್ದಾಳೆ’ ಅಂತ ಕಮಲತ್ತಿಗೆ ಫೋನಾಯಿಸಿ ಹೇಳಿದರು. ಹೋದ ಜೀವ ಮತ್ತೆ ಬಂದಂತಾಯಿತು ಸೀನನಿಗೆ.

ಮತ್ತೆ ಮಳೆ! ರಾತ್ರಿಯ ಹೊತ್ತು ಅದಕ್ಕೆ ಎಲ್ಲಿಲ್ಲದ ಹುಚ್ಚು. ಹಗಲಿಗೆ ಅದರ ಆರ್ಭಟ ಕಡಿಮೆಯಾಗುತ್ತಿತ್ತು. ಊರಿನ ತಗ್ಗಿನ ಪ್ರದೇಶದ ಎಲ್ಲಾ ಮನೆಗಳಿಗೆ ನೀರು ನುಗ್ಗಿ ಆದ ಕಿತಾಪತಿ ಹೇಳಿದರೆ ಮುಗಿಯಲಾರದು. ಯಾರ ಯಾರದೋ ಮನೆಯ ಗ್ಯಾಸ್ ಹಂಡೆ, ಕುರ್ಚಿ, ಮೇಜು ಎಲ್ಲ ತೇಲಿಕೊಂಡು ಎಲ್ಲೆಲ್ಲೋ ಬಿದ್ದಿದ್ದಾವೆ. ಬೆಳಗ್ಗೆ ಎದ್ದು ನೋಡಿದರೆ ರಣರಂಗವೇ. ಕುರುಕ್ಷೇತ್ರ ಯುದ್ಧದ ವಾತಾವರಣದ ನಂತರದ ಬೀಕರ ಮೌನ ಇಲ್ಲೂ.

‘ಯಾರ್ ಯಾರ್ ಯಾರಾರ ಮನೆಲಿ ಉಳ್ಕಂಡನೊ? ಮತ್ತೆಲ್ಲೂ ಸಾವು ಬೇನೆ ಆತ್ಲೆ ತೇಳುದೇ ನೆಮ್ಮದಿ’ ಅಂತ ಪತ್ರಿಕೆ ಓದುತ್ತಾ ಗೌಡರು ನಿಟ್ಟುಸಿರು ಬಿಡುತ್ತಿದ್ದಾರೆ.

‘ಮೂಸ ಕಾಕನ ಮನೆಗೂ ನೀರು ನುಗ್ಗಿ ಕಿತಾಪತಿ. ಒಂದು ವಾರದಿಂದ ಅವರು ಅಂಗಡಿ ನರಸಿಂಹ ಭಟ್ಟರ ಮನೆಯಲ್ಲಿಯೇ ತಂಗಿರುವುದು ಅಂತೆ’ ದಾಸು ಅಪ್ಪನ ಮಾತಿಗೆ ಕೊಂಡಿ ಜೋಡಿಸುತ್ತಿದ್ದಾನೆ.

‘ಮನುಷ್ಯರು ಮನುಷ್ಯರಿಗಾಗದೆ ಇನ್ನಾರಿಗೆ ಆಗುವುದು’ ಅಂತ ಅಂಗಡಿಯಲ್ಲಿ ಕೂತು ಭಟ್ಟರು ಲೋಕರೂಢಿ ಮಾತಾಡುತ್ತಿದ್ದನ್ನ ನಾನೇ ಇವತ್ತು ಚಾಪುಡಿಗೆ ಹೋದಾಗ ಕೇಳಿಸಿಕೊಂಡೆ. ನಾವು ಒಬ್ಬರನ್ನ ಗ್ರೇಸುವುದೇ ಬೇರೆ, ಅವರು ಇರುವುದೇ ಬೇರೆ ನೋಡಿ. ಕೊಯ್ದ ಕೈಗೆ ಉಪ್ಪು ಹಾಕುವರಲ್ಲ ಈ ಅಂಗಡಿ ಭಟ್ಟರು ಅಂತ ಹೇಳಿಸಿಕೊಂಡ ಭಟ್ಟರು ಇವರೇನಾ? ಅಂತ ಅಚ್ಚರಿ ಆಯಿತು.’

ಭಟ್ಟರ ಎರಡು ಹೊತ್ತಿನ ಸಂಧ್ಯಾವಂದನೆ, ಕಾಕನ ನಮಾಜುಗಳು ಒಂದೇ ಮನೆಯಲ್ಲಿ ಅಂತೆ. ಮೂಸಕಾಕ ಬೆಳಗ್ಗೆ ಎದ್ದು ನೀರು ನುಗ್ಗಿದ ಮನೆಯನ್ನು ಶುಚಿಗೊಳಿಸಿ ಮತ್ತೆ ಸಂಜೆ ಹೊತ್ತಿಗೆ ಭಟ್ಟರ ಮನೆಯಲ್ಲೇ ಠಿಕಾಣಿ. ನಬೀಸಕ್ಕನೂ ಜಾನಕಮ್ಮನೂ ಅಡುಗೆ ಮನೆ ಹೊಕ್ಕಿದರೆ ಮಾತೂ ಮಾತೂ... ಈಗ ಯಾವತ್ತಿಗಿಂತಲೂ